## ಬೆಸುಗೆ... ಬೆಸುಗೆ...

ಆ ದಿನ ವಾಟ್ಸಾಪಿನ ಪರದೆಯಲ್ಲಿ ಗೆಳೆಯನೊಬ್ಬನ ವಿವಾಹ ವಾರ್ಷಿಕೋತ್ಸವಕ್ಕೆ ಇತರ ಗೆಳೆಯರೆಲ್ಲರೂ ಶುಭಾಶಯ ಕೋರುತ್ತಿದ್ದರು. ಅವುಗಳಲ್ಲಿ ನನ್ನ ಪಾನಪ್ರಿಯ ಗೆಳೆಯನೊಬ್ಬ ತನ್ನ ವಾಟ್ಸಾಪಿನ ಗೋಡೆಯಲ್ಲಿ 'ಹ್ಯಾಪಿ ವೆಲ್ಡಿಂಗ್ ಆನಿವರ್ಸರಿ ಮಾಮಾ' ಎಂದು ಬರೆದುಕೊಂಡಿದ್ದ. ಈ ಪದದೋಷವನ್ನು ತಿದ್ದಲು ಅವನಿಗೆ ಕರೆಮಾಡಿದ ನಾನು 'ಲೇ ಅದು ವೆಡ್ಡಿಂಗ್ ಅನಿವರ್ಸರಿ. ವೆಲ್ಡಿಂಗ್ ಅನಿವರ್ಸರಿ ಅಲ್ಲ, ಸರಿಮಾಡು ಅದನ್ನ' ಎಂದೆ. ಅವನು, 'ಲೇ ಎರಡೂ ಒಂದಾ ಅಲ್ಲೇನಲೇ? ವೆಡ್ಡಿಂಗ್ ಅಂದ್ರೂ ಬೆಸುಗಿ, ವೆಲ್ಡಿಂಗ್ ಅಂದ್ರೂ ಬೆಸುಗಿ ಅಲ್ಲೇನ್?' ಎಂದಾಗ ಆ ಕ್ಷಣಕ್ಕೆ ಅವನಲ್ಲಿ ದಿವ್ಯಜ್ಞಾನಿಯೊಬ್ಬನ ದರ್ಶನವಾದಂತಾಯಿತು.

**ಮಹೇಶ್ವರ ಹುರುಕಡ್ಲಿ**





## ಹಾನರೇಬಲ್ ಜಜಸ್

ನನ್ನ ತಂಗಿಯ ಪುತ್ರ ಶ್ರೀಹರಿ ಒಂದನೇ ತರಗತಿಯಲ್ಲಿ ಓದುತ್ತಿದ್ದಾನೆ. ಅವನು ಶಾಲೆಯಲ್ಲಿ ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಬೇಕಿತ್ತು. ಮನೆಯಲ್ಲಿ ಎಲ್ಲರೂ ಸೇರಿ ಅವನಿಗೆ ತರಬೇತಿ ಕೊಡುತ್ತಿದ್ದರು. Honorable Judges ಎಂದು ಭಾಷಣ ಆರಂಭಿಸಬೇಕಿತ್ತು. ಎಲ್ಲರೂ ಅವನ ಮುಂದೆ ಪ್ರೇಕ್ಷಕರ ರೂಪ ಧರಿಸಿ ಗಂಭೀರವಾಗಿ ಕೂತಿದ್ದನ್ನು ಕಂಡ ಅವನು ಗಡಿಬಿಡಿಯಲ್ಲಿ, 'ಹಾರಿಬಲ್ ಜಜಸ...' ಎಂದು ಮಾತು ಆರಂಭಿಸಿದ. ಎಲ್ಲರೂ ನಗೆಗಡಲಲ್ಲಿ ತೇಲಾಡಿದರು.

**ಪಂಚಾಂಗಂ ಸುಧಾ**